ಲೇಖಕರನ್ನು ಬಹುವಾಗಿ ಆಕರ್ಷಿಸಿದ ಸ್ಥಳ. ಗಿರೀಶ ಇಂಗ್ಲಂಡಕ್ಕೆ ಹೋಗುವ ಮುನ್ನ ಕಡ್ಡಾಯವಾಗಿ ಈಜು ಕಲಿಯಬೇಕಿತ್ತು, ಆಗ ಕ್ರೀಡಾಪಟುವಾಗಿದ್ದ ಮಾಡರ್ನ್ ಸ್ಕೂಲಿನ ಹೆಡ್‌ಮಾಸ್ತರ್ ಚುಳಕಿ ಅವರಿಂದ ಈಜು ಕಲಿತದ್ದು ಇದೇ ಸೋಮೇಶ್ವರದ ಹೊಂಡ ಮತ್ತು ಪಕ್ಕದ ಕೆರೆಯಲ್ಲಿ. ಈ ನೆನಪಿಗಾಗಿಯೇ ಗಿರೀಶ ತಾವು ತಯಾರಿಸಿದ ಬೇಂದ್ರೆ ಕುರಿತ ಡಾಕ್ಯೂಮೆಂಟರಿಯಲ್ಲಿ ಅವರನ್ನು ಈ ಕೆರೆಯ ದಂಡೆಯಲ್ಲಿ ಕೂಡಿಸಿ ಚಿತ್ರೀಕರಣ ಮಾಡಿದ್ದರು. ಮಗಳು ಶಾಲ್ಮಲಿ, ಮಗ ಸೋಮೇಶ ಆಗಿದ್ದು ಸಹ ಇಲ್ಲಿಯ ಸೋಮೇಶ್ವರನ ಸ್ಮರಣೆಯೇ.

ಗಿರೀಶ ಮತ್ತು ರಘುನಾಥರ ನಡುವೆ 50 ವರ್ಷದ ಅಂತರವಿತ್ತು. ತಂದೆ, ತಾಯಿಯ ಜೊತೆ ಸ್ನೇಹದ, ಗೌರವದ ಸಂಬಂಧ ಹೊಂದಿದ್ದ ಗಿರೀಶ ಅವರನ್ನು ವಯಸ್ಸಾದ ಉಳಿದ ಹಿರಿಯರಂತೆಯೇ ಕಾಣುತ್ತಿದ್ದರು. ತಂದೆಯ ವ್ಯವಹಾರ ಕುಶಲತೆ, ತಾಯಿಯ ಸಾಹಸ ಗುಣಗಳ ಮಿಶ್ರಣವಾಗಿದ್ದರು ಗಿರೀಶ. ಇಂಟರ್ ಕಲಿಯುವಾಗ ಒಂದು ಪೇಪರ್ ಸಂಸ್ಕೃತ ತೆಗೆದುಕೊಂಡಿದ್ದ ಅವರು ಅನಂತರವೂ ಧಾರವಾಡದ ಬಾನುಲಿಯ ಸಂಸ್ಕೃತ ನಾಟಕಗಳಲ್ಲಿ ಭಾಗವಹಿಸುತ್ತಿದ್ದರು. ಕಾಲಿದಾಸ, ಭಾಸರನ್ನು ಮೆಚ್ಚುತ್ತಿದ್ದ ಅವರು ಆನಂದವರ್ಧನನನ್ನು ಸಹ ಓದಿದ್ದರು. ತನ್ನ ಕೆಲಸ, ತಾನು ಮಾತ್ರ ಮುಖ್ಯ, ಇತರ ವ್ಯವಹಾರಗಳು ತನಗೆ ಅಡ್ಡಿ, ಆತಂಕ ಉಂಟು ಮಾಡುತ್ತವೆ ಎಂದು ಭಾವಿಸುತ್ತಿದ್ದರು; ಹೀಗಾಗಿ ಗಿರೀಶ ಅನಗತ್ಯವಾಗಿ ಸಂಘ–ಸಂಸ್ಥೆಗಳ ಸದಸ್ಯರಾಗಲಿಲ್ಲ. ನೌಕರಿ ಮಾಡಿದ್ದು ಸಹ ಎರಡು ಕಡೆ ಮಾತ್ರ: ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ ಮ್ಯಾನೇಜರ್ ಮತ್ತು ಪುಣೆಯ ಫಿಲ್ಮ್–ಟೆಲಿವಿಜನ್ ಸಂಸ್ಥೆಯ ನಿರ್ದೇಶಕ. ಅವರ ಕೃತಿಗಳ ಮಹತ್ವ ಮತ್ತು ಪ್ರಚಾರದಿಂದಾಗಿ ಗಿರೀಶರಿಗೆ ಕೇಂದ್ರ ಮತ್ತು ರಾಜ್ಯ ಸರಕಾರದ ಹಾಗೂ ಹೊರಗಣ ಅನೇಕ ಮಹತ್ವದ ಸನ್ಮಾನಗಳು, ರಾಜ್ಯ ನಾಟಕ ಅಕಾಡೆಮಿ ಅಧ್ಯಕ್ಷ ಪದ, ಕೇಂದ್ರ ಸಂಗೀತ ನಾಟಕ ಅಕಾಡೆಮಿ ಅಧ್ಯಕ್ಷ ಸ್ಥಾನ ಮುಂತಾದುವು ಲಭಿಸಿದಾಗೆಲ್ಲ ನಾವು ಸಂತೋಷಪಟ್ಟಿದ್ದೇವೆ.

***

ಸ್ಕೂಲು ಮತ್ತು ಕಾಲೇಜು ದಿನಗಳಲ್ಲಿ ನಾನು ಗಿರೀಶರನ್ನು ಬೆರಗಿನಿಂದ ಮತ್ತು ಒಂದು ಅಂತರದಿಂದ ನೋಡುತ್ತಿದ್ದೆ. ಗಿರೀಶ ಕಾಲೇಜಿನಲ್ಲಿ ಕಲಿಯುತ್ತಿದ್ದಾಗ ಗ್ಯಾದರಿಂಗ್ ಸಮಯದ ಕನ್ನಡ ಮತ್ತು ಇಂಗ್ಲಿಷ್ ನಾಟಕಗಳಲ್ಲಿ, ಭಾಷಣ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದರು. ಮ್ಯೂಜಿಕ್ ಸರ್ಕಲ್ ಸೆಕ್ರೆಟರಿಯಾಗಿದ್ದು, ಆಗಾಗ ಆಕರ್ಷಕ ಸಂಗೀತ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದರು. ಅವರ ಅಣ್ಣ ವಸಂತ ಸಂಗೀತಪ್ರೇಮಿ, ಶಾಸ್ತ್ರೀಯ ಸಂಗೀತ ಸಾಧಕ; ಅವರು ಸಹ ಕಾಲೇಜಿನಲ್ಲಿ ಇಂಥ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ತಾವು ಇಂಗ್ಲಂಡ್‌ಕ್ಕೆ ಹೋಗುವ ಮೊದಲೇ ಶೇಕ್ಸ್‌ಪಿಯರ್, ಬರ್ನಾರ್ಡ್ ಶಾ, ಅನುಈ, ಪಿರಾಂಡೆಲೊ, ಟೆನೆಸಿ ವಿಲಿಯಮ್ಸ್, ಮಿಲರ್, ಬೆಕೆಟ್ ಮುಂತಾದವರ ನಾಟಕಗಳನ್ನು ಓದಿದ್ದುದಾಗಿ ಗಿರೀಶ ನನಗೆ ಹೇಳಿದ್ದರು. ಅಲ್ಲಿಗೆ ಹೋದ ನಂತರ ನಾಟಕ ಓದುವ ಮತ್ತು ನೋಡುವ ಆಸಕ್ತಿ ಹೆಚ್ಚಿಸಿಕೊಂಡರಂತೆ. ಅದರಿಂದಾಗಿಯೇ ಎಂ.ಎ. ಎರಡನೆಯ ವರ್ಗದಲ್ಲಿ ಪಾಸಾಗುವಂತಾಯಿತು ಎಂದು ಸ್ವಲ್ಪ ವಿಷಾದ, ಹಾಸ್ಯಮಿಶ್ರಿತ ದನಿಯಲ್ಲಿ ಹೇಳುತ್ತಿದ್ದರು.

***

1972ರಲ್ಲಿ ಬಿ.ವಿ. ಕಾರಂತರು ಬೆಂಗಳೂರಲ್ಲಿ ನಡೆಸಿದ ಕಮ್ಮಟ ಮತ್ತು ಪ್ರದರ್ಶನದ ಮೂರು ನಾಟಕಗಳು ಕಾರಂತರ ನಾಟಕ ಬದುಕಿಗೆ ಹೊಸ ಆಯಾಮ ನೀಡಿದುವು, ಹಾಗೆಯೇ ಗಿರೀಶರ ವ್ಯಕ್ತಿತ್ವಕ್ಕೂ ಹೊಸತನವನ್ನು ನೀಡಿದುವು. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದಿಂದ ಆಯೋಜಿತವಾಗಿದ್ದ, ರವೀಂದ್ರ ಕಲಾಕ್ಷೇತ್ರದ ಹೊರಾಂಗಣದಲ್ಲಿ ಪ್ರಯೋಗಗೊಂಡ (1972 ಫೆಬ್ರುವರಿ 11, 12, 13) 'ಜೋಕುಮಾರಸ್ವಾಮಿ', 'ಸಂಕ್ರಾಂತಿ', 'ದೊರೆ ಈಡಿಪಸ್' ಈ ಮೂರೂ ನಾಟಕಗಳನ್ನು ನಾನು ನೋಡಿದ್ದೇನೆ. ಆಗ ಮದ್ರಾಸದಲ್ಲಿ ಕೆಲಸದಲ್ಲಿದ್ದ ಗಿರೀಶ ನಾಟಕದಲ್ಲಿ ಅಭಿನಯಿಸುವ ಹಂಬಲ ಮತ್ತು ಕಾರಂತರ ಅಕ್ಕರೆಯ ಆಹ್ವಾನದಿಂದಾಗಿ ಕೆಲ ಕಾಲ ಬೆಂಗಳೂರಿಗೆ ಬಂದು ಕಮ್ಮಟದಲ್ಲಿ ಪಾಲುಗೊಂಡಿದ್ದರು. ಕಂಬಾರರ 'ಜೋಕುಮಾರಸ್ವಾಮಿ'ಯಲ್ಲಿ ಗೌಡನಾಗಿ,